ಹೇಳಲಾಗುವುದಿಲ್ಲ. ನನಗೆ ಸ್ವತ್ತುಗಳನ್ನು ಮಾರುವ ಮೊದಲು ಬೇರೆಯವರಿಗೆ ಮಾರಿದ್ದರಿಂದ ನಾನು ಅವರ ಮೇಲೆ ಯಾವುದೇ ಕಾನೂನು ಕ್ರಮಗಳನ್ನು ಯಾ ದಾವೆಗಳನ್ನು ಹೂಡಿರುವುದಿಲ್ಲ ಕಾರಣ ನಾನು ಅದನ್ನು ಬಿಟ್ಟು ಬಿಟ್ಟಿರುತ್ತೇನೆ. ನಾವು ಬಿಟ್ಟ 4 ಸೈಟುಗಳ ಒಟ್ಟು ಕ್ರಯದ ಪ್ರತಿಫಲದ ಹಣ ಎಷ್ಟು ಎಂದು ನನಗೆ ಈಗ ನೆನಪಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-16-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ :**

22. ನಾನು ಕಳೆದ ಬಾರಿ ಹೇಳಿದ 8 ಸೈಟುಗಳು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುತ್ತವೆ. ಆ 8 ಸೈಟುಗಳಿಗೂ ಸಹ ನಾನು ತೆರಿಗೆಯನ್ನು ಕಟ್ಟುತ್ತಾ ಬರುತ್ತಿದ್ದೇನೆ. ಆ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

23. ಈ 8 ಸೈಟುಗಳಿಗೂ ಖಾತಾ ಮತ್ತು ಖಾತಾ ನಕಲು ಆಗಿರುವುದಿಲ್ಲ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ದಾವೆ ಇರುವುದರಿಂದ ಅವರು ಖಾತಾ ಮತ್ತು ಖಾತಾ ನಕಲನ್ನು ದಾವೆ ಮುಗಿದ ನಂತರ ಮಾಡುತ್ತೇವೆ ಎಂದು ತಿಳಿಸಿರುತ್ತಾರೆ.

24. ನಾನು ದಿನಾಂಕ 31.07.1980 ರಲ್ಲಿ 8 ಸೈಟುಗಳನ್ನು ಖರೀದಿ ಮಾಡಿರುತ್ತೇನೆ. 1980 ರಿಂದ ಇಲ್ಲಿಯವರೆಗೂ ಆ 8 ಸೈಟುಗಳಿಗೆ ಸಂಬಂಧಿಸಿ ಗ್ರಾಮ ಪಂಚಾಯತಿಯಲ್ಲಾಗಲೀ ಉತ್ತರಹಳ್ಳಿ ಹೋಬಳಿ ಮುನಿಸಿಪಾಲಿಟಿಯಲ್ಲಾಗಲೀ, ಕಾರ್ಪೊರೇಷನ್ ನಲ್ಲಿ ಆಗಲೀ ತೆರಿಗೆಯನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿಯಲ್ಲಿ ತೆರಿಗೆಯನ್ನು ಕಟ್ಟಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಬಿಬಿಎಂಪಿಗೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಮುನಿಸಿಪಾಲಿಟಿಯಲ್ಲಿ ತೆರಿಗೆಯನ್ನು ಕಟ್ಟಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಬಿಬಿಎಂಪಿಗೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

25. ಆ 8 ಸೈಟುಗಳು ಕಾರ್ಪೊರೇಷನ್ ವ್ಯಾಪ್ತಿಗೆ ಯಾವಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ಬಂದಿದೆ ಎಂದು ಹೇಳಲು ನನಗೆ ನೆನಪಿಲ್ಲ.

26. ಸರ್ವೆ ನಂ.9, 30 ಗುಂಟೆಯಲ್ಲಿ ನಾನು ಸಿನಿಮಾ ಮಹದೇಶ್ವರ ಥಿಯೇಟರನ್ನು ನಡೆಸುತ್ತಿದ್ದೇನೆ ಎಂದರೆ ಸರಿ. ಈ ಥಿಯೇಟರನ್ನು 1977 ರಲ್ಲಿ ಪ್ರಾರಂಭಿಸಿರುತ್ತೇನೆ. ಈ 30 ಗುಂಟೆಗೆ ಕುರಿತಾಗಿ ಖಾತಾ ಯಾ ಖಾತಾ ನಕಲು ಯಾ ಖಾತಾ ಪ್ರಮಾಣ ಪತ್ರವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ.

(ಈ ಸಮಯದಲ್ಲಿ ಪ್ರತಿವಾದಿ ಪರ ವಕೀಲರು 30 ಗುಂಟೆಯ ಬಗ್ಗೆ ಪ್ರಶ್ನೆಯನ್ನು ಕೇಳಲು ಅವರು ಯಾವುದೇ ಉಲ್ಲೇಖಗಳನ್ನು ವಾದ ಪತ್ರದಲ್ಲಿ ಮಾಡಿರುವುದಿಲ್ಲ ಮತ್ತು ವಾದಿಯವರು ಕೇವಲ 10 ಗುಂಟೆಯ ಬಗ್ಗೆ ಮಾತ್ರ ತಮ್ಮ ವಾದ ಪತ್ರದಲ್ಲಿ ನಮೂದಿಸಿರುತ್ತಾರೆ ಆದ್ದರಿಂದ ಅವರು ಆ ಬಗ್ಗೆ ಮಾತ್ರ ಕುರಿತಾಗಿ ಪ್ರಶ್ನೆಗಳನ್ನು ಪಾಟಿ ಸವಾಲಿನಲ್ಲಿ ಮಾಡಬಹುದು ಎಂದು ತಮ್ಮ ತಕರಾರನ್ನು ಎತ್ತಿದ್ದು ಆ ಸಂದರ್ಭದಲ್ಲಿ ವಾದಿ ವಕೀಲರು ಎದುರು ಪಕ್ಷಗಾರರು ತುಂಬಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದರ ಬಗ್ಗೆ ತಾವು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ ಎಂದು ಹೇಳಿ 2 ವಕೀಲರು ನ್ಯಾಯಾಲಯದಲ್ಲಿ ಈ ಬಗ್ಗೆ ಜೋರಾಗಿ ವಾದಗಳನ್ನು ಮಾಡಿದ್ದು ಆ ಸಂದರ್ಭದಲ್ಲಿ ವಾದಿ ಪರ ವಕೀಲರು ತಾನು ಪಾಟಿ ಸವಾಲನ್ನು ಈ ದಿನ ಮುಂದುವರಿಸಲು ಆಗುವುದಿಲ್ಲವೆಂದು ನಿಖರವಾಗಿ ಹೇಳಿ ಕಡತಗಳನ್ನು ಮಡಚಿ ನಿಂತಿರುತ್ತಾರೆ. ಆದ್ದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**